

ಜಗದೀಶ ಬಿ. ಹೊಸೂರು, ಮೈಸೂರು
ಮೌನ ಪ್ರಾರ್ಥನೆಗೆ ಒಲಿಯುವ ದೇವರಿಗೆ ಧ್ವನಿವರ್ಧಕ, ಗಂಟೆ, ಜಾಗಟೆಗಳೇಕೆ?



ಮೌನಪ್ರಾರ್ಥನೆ ಮಾಡುತ್ತಿರುವವನು ಇಂತಹ ಜಾಗದಲ್ಲಿದ್ದಾನೆಂದು ಸದ್ದಿನ ಮೂಲಕ ಸೆಳೆಯಲು.

ಬೂಕನಕೆರೆ ವಿಜೇಂದ್ರ, ಮೈಸೂರು
ಹಗಲುಗನಸು ಕಾಣುವುದಕ್ಕೂ ರಾತ್ರಿ ಕನಸು ಕಾಣುವುದಕ್ಕೂ ಏನು ವ್ಯತ್ಯಾಸ?
ರಾತ್ರಿ ಕನಸು ಕಾಣುವವನು ಶ್ರಮಜೀವಿ; ಹಗಲುಗನಸು ಕಾಣುವವನು ಕವಿ.

ವೈ.ವಿ. ಪ್ರಭಾಕರ, ಬೆಂಗಳೂರು
ಟೋಪಿ ಹಾಕಿಸಿಕೊಳ್ಳುವ ಮೊದಲು ಗೊತ್ತೇ ಆಗುವುದಿಲ್ಲವಲ್ಲ, ಏಕೆ ಸಾರ್?
ಮೆದುಳಿಗೆ ಮಂಕುಬೂದಿಯೆಂಬ ಕ್ಲೋರೋಫಾರ್ಮ್ ಎರಚಿರುತ್ತಾರಂತೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಫೋಟೊ ತೆಗೆಸಿಕೊಳ್ಳುವ ಹುಚ್ಚು ಹೆಂಗಸರಲ್ಲೇ ಜಾಸ್ತಿ ಅಲ್ವಾ ಸರ್?



ಅಂತೆಯೇ ಅಂತಹ ಫೋಟೊಗಳನ್ನು ನೋಡುವ ಹುಚ್ಚು ಗಂಡಸರಲ್ಲೇ ಹೆಚ್ಚಂತೆ.

ಅನಸೂಯ ಟಿ. ಕೇದಿಗೆಮನೆ
ಸೋತು ಸುಣ್ಣವಾಗುವುದು ಎಂದರೆ?
ಶಕ್ತಿ ಸೊರಗಿ ಅನಿಮಿಕ್ ಆಗಿ, ಕಲರ್ ಹೋಗಿ, ಸುಣ್ಣದಂತೆ ಬಿಳಿಚಿಕೊಳ್ಳುವುದು.

ಬೆಂ.ಮು. ಮಾರುತಿ, ಬೆಂಗಳೂರು
ಸಂಸಾರ ಎಂಬ ಸುಳಿಯಲ್ಲಿ ಹೇಗೆ ಈಜುವುದು ರಾಮ್?
ಸಂಗಾತಿ ಎಂಬ ಸೋರೆಬುರುಡೆಯನ್ನು ನೆಚ್ಚಿಕೊಂಡು, ಆತುಕೊಂಡು.

ಪಿ. ಜಯವಂತ ಪೈ, ಕುಂದಾಪುರ
ಸ್ವರ್ಗ ಹತ್ತಿರವೋ ನರಕ ಹತ್ತಿರವೋ?
ನರಕವೇ ಎನ್ನಲು ಹತ್ತಿರದ ರಸ್ತೆ, ಸರ್ಕಾರಿ ಕಚೇರಿ, ಆಸ್ಪತ್ರೆಗಳೇ ಸಾಕ್ಷಿ.

ರಾಜೀವ್ ಎನ್ ಮಾಗಲ್, ಸಕಲೇಶಪುರ
ಶಾಸ್ತ್ರ ಹೇಳುವವರಿಗೂ ಟೀವಿ ಸುದ್ದಿವಾಹಿನಿಗಳಿಗೂ ಏನು ವ್ಯತ್ಯಾಸ?
ಅವರು ಶ್ಲೋಕಾತುರರು; ಇವರು ಶೋಕಾತುರರು.

ಜಾನೆಟ್ ವತ್ಸಲ, ಊರಿಲ್ಲ
ಮಠ ಮಾನ್ಯರ ಮರ್ಜಿಯಿಂದ ನನಗೊಂದು ಸರ್ಕಾರಿ ಉದ್ಯೋಗ ದೊರೆಯಬಹುದೆ ಗುರೂಜಿ?
ಉತ್ತರಪ್ರದೇಶದಲ್ಲಿ ಅಂತಹ ಯೋಗ ದೊರಕಬಹುದು.

ಮಲ್ಲಿಕಾರ್ಜುನ, ಸುರಧೇನುಪುರ
ಕಾಸಿದ್ರೆ ಕೈಲಾಸ. ಕೈ ಲಾಸ್ ಆದರೆ?
ಕೈ ಸಾಲ.

ಸುರೇಶ್ ಬಿ.ವಿ. ಬೆಂಗಳೂರು
ಈ ಬ್ರೇಕಿಂಗ್ ನ್ಯೂಸ್‌ಗಳು ಏನನ್ನು ಬ್ರೇಕ್ ಮಾಡುತ್ತವೆ?
ಎಷ್ಟೋ ವಿಶ್ವಾಸಗಳನ್ನು, ಸಂಘಗಳನ್ನು, ಸಂಗಗಳನ್ನು.

ಸುಕನ್ಯಾ ಮಲ್ಲೋಲಿ, ಮೈಸೂರು
ವಾರದ ಪ್ರಶ್ನೆ ಇರುವಂತೆ ವಾರದ ಉತ್ತರ ಇದ್ದರೆ ಒಳ್ಳೆಯದಲ್ಲವೆ?
ಛೆ! ನನ್ನುತ್ತರದ ಮೌಲ್ಯವನ್ನು ನಾನೇ ನಿರ್ಧರಿಸಲು ಇದೇನು ಪಾಲಿಕೆಯ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮೆ?

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಮಹಾಭಾರತದ ಶಲ್ಯನಿಗೂ ಇಂದಿನ ಮಲ್ಯನಿಗೂ ವ್ಯತ್ಯಾಸವೇನು?
ಮಲ್ಯ ಕಿಂಗ್ ಫಿಷರ್; ಶಲ್ಯ ಕಿಂಗ್ ಫಿನಿಷರ್.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಮದುವೆಗಳು ಸ್ವರ್ಗದಲ್ಲಿ ನಿಶ್ಚಯವಾದರೆ ನರಕದಲ್ಲಿ ಏನು ನಿಶ್ಚಯವಾಗಿರುತ್ತದೆ?
ವಿಚ್ಛೇದನ.

## ವಾರದ ಪ್ರಶ್ನೆ

ಸಿಹಿಮೊಗೆ ರಮೇಶ್, ಮೈಸೂರು
ಬೇಲ್ ಮೇಲೆ ಹೊರಬಂದ ಆರೋಪಿಯನ್ನು ವೀರನಂತೆ ಸ್ವಾಗತಿಸುವುದು ಏನನ್ನು ಸೂಚಿಸುತ್ತದೆ?
ಹೊಲಸು ತಿನ್ನುವವರು ಮನುಷ್ಯರೂಪ ಧರಿಸಿರುವುದನ್ನು ಸೂಚಿಸುತ್ತದೆ.

ಮಧುಮತಿ ಅಭಿಷೇಕ್, ಚಿತ್ರದುರ್ಗ
ಬಾಹ್ಯ ಸೌಂದರ್ಯಕ್ಕೂ ಅಂತರಂಗದ ಸೌಂದರ್ಯಕ್ಕೂ ವ್ಯತ್ಯಾಸವೇನು?
ಒಂದಕ್ಕೆ ಕನ್ನಡಿ ಸಾಕು. ಇನ್ನೊಂದಕ್ಕೆ ಎಂಆರ್‌ಐ (Morality, Reliability, Integrity) ಸ್ಕ್ಯಾನೇ ಬೇಕು.

ಬಾ.ರಂ ಸುರೇಶ್, ಶಿವಮೊಗ್ಗ
ಇಲ್ಲೊಬ್ಬಳು 'ನಾನು ಸತ್ತರೂ ನಿನ್ನನ್ನು ಲಗ್ನವಾಗಲ್ಲ' ಅಂತಾಳೆ. ಸತ್ತಮೇಲೆ ಮದುವೆ ಆಗುವುದು ಹೇಗೆ?
ಅವಳೇ 'ಸರಸಕು ರಾರಾ...' ಎಂದು ಕರೆಯುತ್ತಾ ದಾರಿ ತೋರಿಸುತ್ತಾಳಂತೆ.

ಎಂ.ಟಿ. ರಮಾನಂದರೆಡ್ಡಿ, ಮದಕರಿಪುರ
ಹೆಂಡ ಹೆಂಡತಿ ಇವು ಪರ್ಯಾಯ ಶಬ್ದಗಳೇ?



ಊಹೂಂ. ಹೆಂಡತಿ ಶಬ್ದ; ಹೆಂಡ ಸದ್ದಿಲ್ಲದ ಉಪ–ದ್ರವ.

ಹೆಚ್.ಎಮ್. ಚನ್ನವೀರಯ್ಯ, ಹೂವಿನಹಡಗಲಿ
ಮಾನ ಮತ್ತು ಮೌನ; ಇವುಗಳಲ್ಲಿ ಯಾವುದು ಉತ್ತಮ?
ಅಭಿ, ಸ, ಸಮ್, ಚಾಂದ್ರ, ಸೌರ ಎಲ್ಲವುಗಳೊಡನೆಯೂ, ಒಂಟಿಯಾಗಿಯೂ ಘನತೆವೆತ್ತ ಮಾನ.

ಎನ್. ವೈದೇಹಿ, ಮೈಸೂರು
'ಬಿ ಪಾಸಿಟಿವ್' ಎನ್ನುವವರೆಲ್ಲ ಈಗ 'ಪಾಸಿಟಿವ್' ಎಂದಾಕ್ಷಣ ಬೆಚ್ಚಿಬೀಳುವ ಪರಿಸ್ಥಿತಿಯಿದೆಯಲ್ಲ, ಏನು ಮಾಡುವುದು?
ಅದನ್ನೂ ಪಾಸಿಟಿವ್ ಆಗೇ ಎದುರಿಸಿ. ಈ ವಿಷಯದಲ್ಲಿ 2 ಪ್ಲಸ್ ಸೇರಿದರೆ ಒಂದು ಮೈನಸ್.

■ ರಾಮ್